ಶ್ರೀ ಸಿ ಬೈರೇಗೌಡ: ನಿಮಗೆ ಏನು ಬೇಕೋ ಅದನ್ನು ನೀವು ಉತ್ತರದಲ್ಲಿ ಹೇಳಿದ್ದೀರಿ.

ಅಧ್ಯಕ್ಷರು:ಇದರ ಬಗ್ಗೆ ತಾವು ದಯಮಾಡಿ ಕೇಳಿ

ಶ್ರೀ ಬಿ. ಬಸವಲಿಂಗಪ್ಪ: ಬೈರೇಗೌಡರೇ, ತಾವು ಹೋದ ಅಸೆಂಬ್ಲಿಯಲ್ಲಿ ಇದರ ಬಗ್ಗೆ ಗಮನ ಸೆಳೆದಿದ್ದೀರಿ . ಹಾಗೂ ಆ ಬಗ್ಗೆ ನಾನು ಉತ್ತರ ಕೊಟ್ಟಿದ್ದೂ ಇದೆ. ಕೊನೆಗೆ ಪೋರ್ಟ್‌ಫೋಲಿಯೋ ಬದಲಾವಣೆ ಆಯಿತು. ಮತ್ತೆ ನಾನು ಈಗ ಈ ಖಾತೆಯಲ್ಲಿದ್ದೇನೆ. ಆ ಬಗ್ಗೆ ನಾನು ತೀರ್ಮಾನ ತೆಗೆದುಕೊಂಡಿಲ್ಲ ಸ್ವಾಮಿ ಮಾನ್ಯ ಸದಸ್ಯರು ಏನು ವಿಷಯ ಹೇಳುತ್ತಿದ್ದಾರೆ ಅದೆಲ್ಲಾ ಸಂಪೂರ್ಣ ನನಗೆ ಒಪ್ಪಿಗೆ. ಯಾವ ರೂಪದಲ್ಲಿ ಎಷ್ಟು ಹೆಚ್ಚು ಮಾಡಬೇಕೆನ್ನುವುದರ ಬಗ್ಗೆ ಇನ್ನು 15 ದಿವಸಗಳಲ್ಲಿ ತೀರ್ಮಾನ ಮಾಡುತ್ತೇನೆ.

ಶ್ರೀ ಸಿ ಬೈರೇಗೌಡ : ಬರುವ ತಿಂಗಳಿಂದ 10 ಪೈಸೆ ಕಡಿಮೆ ಮಾಡಬೇಕೆಂದು ಮಾಡುತ್ತಿದ್ದಾರೆಂಬುದರ ಬಗ್ಗೆ ಉತ್ತರ ಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ : ಊಹೆ ಮೇಲೆ ಮಾತನಾಡುವುದನ್ನು ನಾನು ಕೇಳುವುದಿಲ್ಲ.

ಶ್ರೀ ಸಿ ಬೈರೇಗೌಡ : ಆ ಬಗ್ಗೆ ಸುದ್ದಿ ಇದೆ.

ಶ್ರೀ ಬಿ. ಬಸವಲಿಂಗಪ್ಪ: ಆ ಬಗ್ಗೆ ಯಾವ ಸರ್ಕಾರಿ ಆಜ್ಞೆ ಆಗಿದೇ?

ಅಧ್ಯಕ್ಷರು: ಹೈಪಾಥಟಿಕಲ್ ಪ್ರಶ್ನೆಗೆ ಉತ್ತರ ಕೊಡುವ ಬಗ್ಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ: ಈ ಸದನದ ಮುಂದೆ ಈ ವಿಷಯ ಇಲ್ಲ, ಸರ್ಕಾರದಲ್ಲೂ ಈ ವಿಷಯ ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ನಾನು ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಸರ್ಕಾರದ ಗಮನವನ್ನು ಸೆಳೆದಿದ್ದೆ. ಅಚೆಂಡಾದಲ್ಲಿ ದಕ್ಷಿಣ ಜಿಲ್ಲೆಯೆಂದು ಆಚ್ಚಾಗಿದೆ.

ಅಧ್ಯಕ್ಷರು: ಅಚ್ಚು ತಪ್ಪಾಗಿದೆ.

2) ಉ. ಕನ್ನಡ ಜಿಲ್ಲೆಯ ಮುಟ್ಟುಗಲ್ಲಿಯಲ್ಲಿ ದಿನಾಂಕ 7–11–90 ರಂದು ಅಬಕಾರಿ ತಂಡದ ಮೇಲೆ ಹಲ್ಲೆ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಮುಟ್ಟುಗಲ್ಲಿಯಲ್ಲಿ ದಿನಾಂಕ 7–11–90 ರಂದು ಅಬಕಾರಿ ತಂಡದ ಮೇಲೆ ಹಲ್ಲೆ ಮಾಡಿದ ಪ್ರಯುಕ್ತ ಒಬ್ಬ ವ್ಯಕ್ತಿಯು ಮೃತಪಟ್ಟ ವಿಚಾರದ ಬಗ್ಗೆ ಗೃಹಮಂತ್ರಿಯವರ ಗಮನ ಸೆಳೆಯುತ್ತೇನೆ.

† ಶ್ರೀ ಧರ್ಮಸಿಂಗ್ (ಗೃಹ ಸಚಿವರು):– ಮಾನ್ಯ ಅಧ್ಯಕ್ಷರೇ, ಕಾರವಾರ ತಾಲ್ಲೂಕಿನಲ್ಲಿ ಗೋವಾ ರಾಜ್ಯದ ಗಡಿಯಿಂದ ಅಧಿಕಪ್ರಮಾಣದಲ್ಲಿ ಫೆನ್ನಿಯ ಕಳ್ಳಸಾಗಾಣಿಕೆಯಾಗುತ್ತಿದೆ. ಗೋವಾಗಡಿ ಪ್ರದೇಶದಲ್ಲಿ ಸಾಮಾನ್ಯವಾಗಿ ಕಾನೂನುಬಾಹಿರ ಫೆನ್ನಿ ಮಾರಾಟ ತೊಂದರೆಯಿದ್ದರೂ ಕಾರವಾರವು ಗೋವಾಕ್ಕೆ ಹತ್ತಿರದಲ್ಲಿರುವುದರಿಂದ ಮಾರ್ಗದಲ್ಲಿ ಅದರ ಪ್ರಭಾವವು ವಾಸ್ತವಾಗಿ ಕಾರವಾರದಲ್ಲಿರುತ್ತದೆ.

ಆದಾಗ್ಯೂ ಈ ದುರ್ವ್ಯವಹಾರವನ್ನು ಸಮುದ್ರದ ಮೂಲಕ ಹತ್ತಿಕ್ಕಲು ಸತತವಾಗಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಕಳ್ಳಸಾಗಾಣಿಕೆಯನ್ನು ತಡೆಯಲು ಒಬ್ಬ ಉಪ ಅಬಕಾರಿ ಆಧೀಕ್ಷಕರ ಮುಂದಾಳತ್ವದಲ್ಲಿ ಒಂದು ಅಬಕಾರಿ ಇಂಟೆಲಿಜೆನ್ಸ್ ಬ್ಯುರೋ ಇದ್ದು, ಅವರ ಆಧೀನದಲ್ಲಿ ಬಂದು ದಾಳಿ ತಂಡ ಮತ್ತು ಇನ್ನೊಂದು ಸಮುದ್ರದ ತಂಡವು ಇರುತ್ತದೆ. ಮತ್ತೊಬ್ಬ ಅಬಕಾರಿ ಉಪಆಧೀಕ್ಷಕರು ಎರಡು ಚೆಕ್‌ಪೋಸ್ಟ್‌ಗಳ ಉಸ್ತುವಾರಿಯನ್ನು ಹೊಂದಿದ್ದು ಇದನ್ನು ಸತತವಾಗಿ 24 ಗಂಟೆಗಳ ಕಾಲವು ಅಬಕಾರಿ ಸಿಬ್ಬಂದಿಯು ನೋಡಿಕೊಳ್ಳುತ್ತಿದೆ. ಮತ್ತೊಂದು ಎನ್‌ಫೋರ್ಸ್‌ಮೆಂಟ್ ಉಪವಿಭಾಗವೂ ಸಹ ಅಲ್ಲಿರುತ್ತದೆ.

1989–90ನೇ ಸಾಲಿನಲ್ಲಿ 167 ಪ್ರಕರಣಗಳನ್ನು ದಾಖಲು ಮಾಡಿದ್ದು, 23 ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು 4,51,111ಲೀಟರ್‌ನಷ್ಟು ಬೆಲ್ಲವನ್ನು ಮತ್ತು 90,620 ಲೀಟರ್ ಫೆನ್ನಿಯನ್ನು ನಾಶಪಡಿಸಲಾಗಿದೆ. ಪ್ರಸಕ್ತ ಸಾಲಿನ ಜುಲೈ 1990 ರಿಂದ ಅಕ್ಟೋಬರ್ 1990ರವರೆಗೆ 102 ಪ್ರಕರಣಗಳನ್ನು ದಾಖಲು ಮಾಡಿದ್ದು, 12 ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು 18,275 ಲೀಟರ್ ಫೆನ್ನಿಯನ್ನು ನಾಶಗೊಳಿಸಲಾಗಿದೆ. ಈ ಇಲಾಖೆಯ ಎನ್‌ಫೋರ್ಸ್‌ಮೆಂಟ್ ಚಟುವಟಿಕೆಗಳು ಹೆಚ್ಚಾಗಿರುವುದರಿಂದ ಜಿಲ್ಲೆಯಲ್ಲಿ ಹಾಗೂ ಕಾರವಾರ ತಾಲ್ಲೂಕಿನಲ್ಲಿ ಸಾರಾಯಿ ಸೇವನೆಯು ಹೆಚ್ಚಾಗಿರುವುದು ಕಂಡುಬರುತ್ತಿದೆ.

ಕಾರವಾರ ಜಿಲ್ಲೆಯಲ್ಲಿ 1989–90 ಮತ್ತು 1990–91ನೇ ಸಾಲಿನಲ್ಲಿ ಸಾರಾಯಿ ಸೇವನೆಯ ಪ್ರಮಾಣ

	1989–90	1990–91
ಜುಲೈ	1,06,335	1,25,856
ಆಗಸ್ಟ್	1,05,774	1,16,424
ಸೆಪ್ಟೆಂಬರ್	1,16,034	1,38,345
ಅಕ್ಟೋಬರ್	1,20,660	1,12,308

ಅಕ್ಟೋಬರ್ 1990ರಲ್ಲಿ ಕೋಮುಗಲಭೆಯ ಕಾರಣದಿಂದಾಗಿ ಮದ್ಯದಂಗಡಿಗಳನ್ನು ಮುಚ್ಚಿದ್ದುದರಿಂದ ಸೇವನೆಯ ಪ್ರಮಾಣವು ಕಡಿಮೆಯಾಗಿದೆ.

ಕಾರವಾರ ತಾಲ್ಲೂಕು

	1989–90	1990–91
ಜುಲೈ	4,557	4,719
ಆಗಸ್ಟ್	6,000	5,760
ಸೆಪ್ಟೆಂಬರ್	5,100	5,025
ಅಕ್ಟೋಬರ್	4,500	5,670

ಗಡಿಯಲ್ಲಿನ ಫೆನ್ನಿಯ ಕಳ್ಳಸಾಗಾಣಿಕೆಯನ್ನು ತಡೆಗಟ್ಟುವ ಸಲುವಾಗಿ ಎನ್‌ಫೋರ್ಸ್‌ಮೆಂಟ್ ಕಾರ್ಯಾಚರಣೆಯ ಕ್ರಮವನ್ನು ಹೆಚ್ಚಿಸಿ ಬಲಪಡಿಸಲಾಗಿದೆ.

ಗೋವಾ ಫೆನ್ನಿಯ ಕಳ್ಳಸಾಗಾಣಿಕೆಗೆ ಸಂಬಂಧಿಸಿದಂತೆ ಹಾಗೂ ಮೇಲಿನ ದುರುದ್ದೇಶದ ಬೆಂಕಿ ಹಚ್ಚುವಿಕೆ ಮತ್ತು ಜಗಳಗಳಿಗೆ ಕುರಿತಂತೆ, ಕಾರವಾರದ ಜಿಲ್ಲಾಧಿಕಾರಿಗಳು ವರದಿ ಮಾಡುತ್ತಾ. ದಿನಾಂಕ 06.11.1990 ರಂದು ಗೋವಾದಿಂದ ಕಾರಿನಲ್ಲಿ ಹಿಂದಿರುಗುತ್ತಿದ್ದ ಶ್ರೀ ವಸಂತ ಅಸನೋಟ್ಕರ್ ಅವರನ್ನು ಅಬಕಾರಿ ಇಲಾಖೆಯ ಸಿಬ್ಬಂದಿಯವರು ಮಜಲಿ ಚೆಕ್‌ಪೋಸ್ಟ್ ಬಳಿ ತಡೆದರು. ಶ್ರೀ ವಸಂತ ಅಸನೋಟ್ಕರ್ ಅವರು ವಾಹನವನ್ನು ನಿಲ್ಲಿಸದೆ ಸಿಬ್ಬಂದಿಯು ತಪಾಸಣೆ ಮಾಡುವುದಕ್ಕೆ ಅವಕಾಶಕೊಡದೆ ಹೋದಾಗ ಉಪನಿರೀಕ್ಷಕರು ವಾಹನವನ್ನು ಹಿಂಬಾಲಿಸಿದರು. ಆದರಿಂದ ಲಟಾಪಟಿ ಆಯಿತು. ಶ್ರೀ ವಸಂತ ಅಸನೋಟ್ಕರ್ ಮತ್ತು ಅಬಕಾರಿ ಉಪನಿರೀಕ್ಷಕರು ಒಬ್ಬರಮೇಲೊಬ್ಬರು ಆಕ್ರಮಣ ಮಾಡಿದರು, ಶ್ರೀ ವಸಂತ ಅಸನೋಟ್ಕರ್ ಅವರು ಚಿತ್ತಾಕುಲ ಪೋಲೀಸ್ ಠಾಣೆಯಲ್ಲಿ, ಅಬಕಾರಿ ಉಪನಿರೀಕ್ಷಕರು ಮತ್ತು ನಾಲ್ಕುಜನ ರಕ್ಷಕರು ಹಾಗೂ ಇಬ್ಬರು ಅಬಕಾರಿ ಗುತ್ತಿಗೆದಾರರ ನೌಕರರ ಮೇಲೆ ಆಕ್ರಮಣದ ದೂರನ್ನು ಕೊಟ್ಟರು. ಅಬಕಾರಿ ಉಪನಿರೀಕ್ಷಕರೂ ಸಹ ಆಕ್ರಮಣದ ವಿರುದ್ಧ ಪ್ರತಿದೂರು ನೀಡಿದರು.

ಈ ಘಟನೆಯ ನಂತರ, ಶ್ರೀ ವಸಂತ ಅಸನೋಟ್ಕರ್ ಅವರು ತಮ್ಮ ಬೆಂಬಲಿಗರೊಡನೆ ಜಿಲ್ಲಾಧಿಕಾರಿಗಳ ಕಚೇರಿಗೆ ಬಂದು ಅಬಕಾರಿ ಉಪನಿರೀಕ್ಷಕರನ್ನು ಅಮಾನತ್ತಿನಲ್ಲಿಡುವಂತೆ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಬಳಿ ಶ್ರೀ ವಸಂತ ಅಸನೋಟ್ಕರ್ ಅವರ ಬೆಂಬಲಿಗರು ಪಾನಮತ್ತರಾಗಿ ಗಲಾಟೆ ಮಾಡುತ್ತಿದ್ದುದರಿಂದ ಜಿಲ್ಲಾಧಿಕಾರಿಗಳು ಅಬಕಾರಿ ಉಪನಿರೀಕ್ಷಕರನ್ನು ಕರೆಸಿ ಈ ಬಗ್ಗೆ ವಿಚಾರಿಸಿದರು. ಮತ್ತು ಜಿಲ್ಲಾಧಿಕಾರಿಗಳು ಪೋಲೀಸರನ್ನು ಕರೆಸಿ ಅಬಕಾರಿ ಉಪನಿರೀಕ್ಷಕರನ್ನು ಅವರಿಗೆ ಒಪ್ಪಿಸಿದರು.

ದಿನಾಂಕ: 07–11–1990ರಂದು ಶ್ರೀ ಅಸನೋಟ್ಕರ್ ಮತ್ತು ಬೆಂಬಲಿಗರು ಪುನಃ ಕಚೇರಿಗೆ ಬಂದು ಅಬಕಾರಿ ಗುತ್ತಿಗೆದಾರರ ಗುತ್ತಿಗೆಯನ್ನು ರದ್ದುಮಾಡುವಂತೆ ಶ್ರೀ ದಿವಾಕರ್‌ಶೆಟ್ಟಿ, ಪೋಲೀಸ್ ಉಪ ಅಧೀಕ್ಷಕರು, ಕಾರವಾರ ಇವರು ಅಬಕಾರಿ ಗುತ್ತಿಗೆದಾರ ಶ್ರೀ ಸತೀಶ್‌ಚಂದ್ರ ಹೆಗ್ಗಡೆ ಅವರ ನಿಕಟ ಸಂಬಂಧಿಯಾಗಿರುವುದರಿಂದ ಅವರನ್ನು ವರ್ಗಾಯಿಸುವಂತೆಯೂ ಮತ್ತು ಅಬಕಾರಿ ಉಪನಿರೀಕ್ಷಕರನ್ನು ಅಮಾನತ್ತಿನಲ್ಲಿಡುವಂತೆಯೂ ಒತ್ತಾಯಿಸುತ್ತಿದ್ದರು. ಗುಂಪನ್ನು ಚದುರುವಂತೆ ತಿಳಿಸಿದಾಗ ಅವರು ನಿರಾಕರಿಸಿದರು. ಬೂಟ್‌ಲೆಗ್ಗರ್ಸ್, ಫೆನ್ನಿ ಕಳ್ಳಸಾಗಾಣಿಕೆದಾರರು ಮತ್ತು ಸ್ಥಳೀಯ ಗೂಂಡಾಗಳನ್ನು ಒಳಗೊಂಡಿದ್ದ ಈ ಗುಂಪು ಕಾರವಾರ ನಗರ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮೇಲೆ ಆಕ್ರಮಣ ಮಾಡಿದರು ಹಾಗೂ ಚದುರುವಾಗ ಅಂಗಡಿಗಳನ್ನು ಮುಚ್ಚುವಂತೆ ಅಂಗಡಿಗಳ ಮಾಲೀಕರ ಮೇಲೆ ಒತ್ತಾಯಿಸಿದರು. ಈ ಸಂಬಂಧವಾಗಿ ಕಾರವಾರ ನಗರ ಪೋಲೀಸ್ ಠಾಣೆಯಲ್ಲಿ ಪ್ರಕರಣವೊಂದನ್ನು ದಾಖಲು ಮಾಡಲಾಗಿದೆ.

ಕಳ್ಳಸಾಗಾಣಿಕೆದಾರರು ಮತ್ತು ಶ್ರೀ ಅಸನೋಟ್ಕರ್ ಅವರ ಬೆಂಬಲಿಗರನ್ನು ಒಳಗೊಂಡ ಕಿಡಿಗೇಡಿಗಳ ಗುಂಪೊಂದು ಸಹ ಅಬಕಾರಿ ಗುತ್ತಿಗೆದಾರರ ಕಚೇರಿಗೆ ದಾಳಿ ಮಾಡಿ ಒಂದು ಜೀಪನ್ನು ಸುಟ್ಟುಹಾಕಿತು,, ಅಬಕಾರಿ ಗುತ್ತಿಗೆದಾರರ ದೋಣಿಯೊಂದನ್ನು ಹಾಳು ಮಾಡಿತು. ಸಾಯಂಕಾಲ ಅಬಕಾರಿ ಗುತ್ತಿಗೆದಾರರ ನೌಕರರನ್ನು ಸಾಗಿಸುತ್ತಿದ್ದ ಜೀಪು ಒಂದನ್ನು ದಾರಿಯಲ್ಲಿ ತಡೆದು ಗೋಪಿಶೆಟ್ಟಿ ಗ್ರಾಮದ ಬಳಿ ನೌಕರರ ಮೇಲೆ ಆಕ್ರಮಣ ಮಾಡಿತು. ಗಾಯಗೊಂಡ ನೌಕರರಲ್ಲಿ ಒಬ್ಬರು ಸತ್ತು ಸುಮಾರು ಇತರೆ 10 ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ.

ದೂರು ಕೊಟ್ಟವರು ತಮ್ಮ ದೂರಿನಲ್ಲಿ ಶ್ರೀ ವಸಂತಅಸನೋಟ್ಕರ್ ಮತ್ತು ಇತರೆ 25 ಜನರು ಈ ಘಟನೆಗೆ ಜವಾಬ್ದಾರರು ಎಂದು ತಿಳಿಸಿರುತ್ತಾರೆ. ಅವರ ವಿರುದ್ಧ ಕೊಲೆಯ ಪ್ರಕರಣವೆಂದು ದಾಖಲುಮಾಡಿಕೊಳ್ಳಲಾಗಿದೆ ಮತ್ತು ತನಿಖೆಯು ನಡೆಯುತ್ತಿದೆ.

† ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ಈ ವಸಂತ ಅಸನೋಟ್ಕರ್ ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತು ಅಲ್ಲಿ ಅವರು ಜವಾಬ್ದಾರಿಯುತ ಸ್ಥಾನವನ್ನು ಹೊಂದಿದ್ದರು ಅಂತ ಹೇಳಿ.....

ಶ್ರೀ ಎಂ. ವೀರಪ್ಪ ಮೊಯಿಲಿ:– ಅದಕ್ಕೆ ಇದೇನು ಸಂಬಂಧ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:– ನಾನು ಇನ್ನೂ ಪ್ರಾರಂಭವನ್ನೇ ಮಾಡಿಲ್ಲ.

Sri. Shivananda H Koujalagi Sir.....

Mr. Speaker:- Sri Chandre gowda is capable of taking care of himself. Why do you come to his defence?

ಶ್ರೀ ಡಿ. ಬಿ. ಚಂದ್ರೇಗೌಡ: ಇಲ್ಲಿ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಇಲ್ಲಿಯವರೆಗೆ ವಸಂತ ಅಸನೋಟ್ಕರ್ ಅವರ ಬಂಧನ ಆಗಿಲ್ಲ. ಈ ಸಂಬಂಧ ಇಲ್ಲದೇ ಇದ್ದರೆ ಪೂರ್ಣವಾಗಿ ಹೇಳಿಕೆಯ ಉದ್ದಕ್ಕೂ ಈತನು ತನ್ನ ಹಿಂದೆ ಒಂದು ಸಮಾಜಘಾತಕ ಶಕ್ತಿಗಳನ್ನು ಕಟ್ಟಿಕೊಂಡಿದ್ದಾನೆ, ಇದೇ ಅವನ ಕಸುಬು ಎಂದು ಹೇಳಿಕೊಂಡು ಬಂದಿದ್ದೀರಿ.

ಗು.ತಿ.ಇ. ಪಿ.ಎಂ.

ಆದರೆ ಇಂತಹ ಪ್ರಮುಖ ವ್ಯಕ್ತಿ ಕೊಲೆಯಲ್ಲಿ, ದರೋಡೆಯಲ್ಲಿ ಪಾಲುದಾರನಾಗಿದ್ದರೂ,ಅವನ ಬಂಧನ ಆಗದಿರುವುದಕ್ಕೆ ಕಾರಣ ಏನು? ಯಾರದೋ ಆಶೀರ್ವಾದ ಇರಬಹುದು. ಆಳುವ ಪಕ್ಷದಾ ಅಥವಾ ಆಳುವ ಪಕ್ಷಕ್ಕೆ ಸೇರಿದವರು ಎನ್ನುವ ಕಾರಣಕ್ಕೆ ಆತನಿಗೆ ಬಂಧನ ಮಾಡಿಲ್ಲ ಎಂದು ಹೇಳಿದರೆ, ಈ ಆರೋಪವನ್ನು ನೀವು ಇಲ್ಲ ಎಂದು ಯಾವ ರೀತಿ ಸಾಬೀತು ಮಾಡುತ್ತೀರಿ ಎಂಬುದನ್ನು ನನಗೆ ಹೇಳಿ. ಏನು ಸಂಬಂಧ ಇವರಿಗೆ? ಈ ಸಾರಿ ಇಷ್ಟೊಂದು ಅಬಕಾರಿ ಹರಾಜಿನಲ್ಲಿ ಕಾರವಾರ ಜಿಲ್ಲೆಗೆ ಬಂದಿದೆ. ಹಿಂದಿನ ಮಾನ್ಯ ಸಚಿವರೂ ಇಲ್ಲಿಯೇ ಕುಳಿತಿದ್ದಾರೆ, ಬಹಳ ದೊಡ್ಡ ದೊಡ್ಡ ಮಾತನಾಡಿದ್ದರು. ನಾನು ಹೇಳಿದೆ ಮಾರ್ಚ್ ಅಥವಾ ಏಪ್ರಿಲ್ ಬರಲಿ, ಅಸಲು ಬಡ್ಡಿ ಎಲ್ಲಾ ಸೇರಿ ಲೆಕ್ಕಾಚಾರ ಹಾಕಿ ಮಾತನಾಡುತ್ತೇನೆ ಎಂದು. ಇದರಿಂದ ಇಲ್ಲಿ ಏನು ಗೊತ್ತಾಗುತ್ತದೆ ಎಂದರೆ. ಇಷ್ಟು ಹರಾಜುಗಳನ್ನು ಮಾಡಿದರೂ ಅವನಿಗೆ ರಕ್ಷಣೆ ಕೊಡುವುದಿಲ್ಲ. ಯಾರು ರಾಜ್ಯದ ಬಜೆಟ್‌ಗೆ ದುಡ್ಡು ಕೊಡತಕ್ಕ ಪ್ರಯತ್ನ ಮಾಡಿದ್ದಾರೆ, ಅವನಿಗೆ ರಕ್ಷಣೆ ಸಿಗುವುದಿಲ್ಲ. ಅವನ ಸಂಬಂಧಿಕ ಕಾರವಾರದ ಅಬಕಾರಿ ಗುತ್ತಿಗೆದಾರರಾದ ಸತೀಶ್‌ಚಂದ್ರ ಹೆಗ್ಗಡೆಯ ಸಂಬಂಧಿಕ ಆಗಿದ್ದಾನೆ. ಅಲ್ಲಿರತಕ್ಕ ಅಬಕಾರಿ ಅಧಿಕಾರಿಗಳನ್ನುವರ್ಗ ಮಾಡಲು ಇವರಿಗೆ ಏನ್ಲು ಸಂಬಂಧ? ಈ ಸಂಬಂಧವನ್ನು ತಿಳಿಸಬೇಕು. ಬಹಳ ಮುಖ್ಯವಾಗಿ ಅಲ್ಲಿ ಹಲ್ಲೆಗೆ ಈಡಾಗಿರತಕ್ಕ ಅಧಿಕಾರಿಗಳ ತಕ್ಷಣ ವರ್ಗವಾಗುತ್ತದೆ. ಆದರೆ ಹಲ್ಲೆ ಮಾಡಿದವರ ಬಂಧನ ಆಗುವುದಿಲ್ಲ. ಇದು ಬಹಳ ಮುಖ್ಯ ಹಾಗಾದರೆ ಅಧಿಕಾರಿಗಳಿಗೆ ರಕ್ಷಣೆ ಕೊಡತಕ್ಕ ಜವಾಬ್ದಾರಿಯನ್ನು ಸರ್ಕಾರ ಹೊರುತ್ತದೆಯೇ? ಇಲ್ಲ ತಮ್ಮ ಪಕ್ಷಕ್ಕೆ ಸೇರಿದವರು ಎಂಬ ಕಾರಣಕ್ಕೆ ಅಪರಾಧವನ್ನು ಮಾಡಿದವರಿಗೆ ರಕ್ಷಣೆ ಕೊಡತಕ್ಕ ಕೆಲಸ ನಡೆಯುತ್ತಿದೆಯೋ ? ಕಾನೂನನ್ನು ಕಾಪಾಡತಕ್ಕ ಜವಾಬ್ದಾರಿ ಏನಾದರೂ ಈ ಕಾಂಗ್ರೆಸ್ ಮುಖಂಡರಿಗೆ ವಹಿಸಿದ್ದೀರಾ? ಇಲ್ಲ ತಮ್ಮ ಇಲಾಖೆಯಲ್ಲಿ ಇದೆಯೋ? ಇದನ್ನು ನಾನು ತಿಳಿಯಬಯಸುತ್ತೇನೆ. ಜೀಲಾ ದಿಕಾರಿಗಳ ಕಚೇರಿಗೆ ಹೋಗಿ ಜಗಳ ಮಾಡುತ್ತಾರೆ, ಗಲಾಟೆ ಮಾಡುತ್ತಾರೆ,

ಅಲ್ಲಿ ಗಲಾಟೆಯಾಗುತ್ತದೆ, ಆ ಊರಿನ ಬಂದ್ ಆಗುತ್ತದೆ. ಈ ಹಿನ್ನೆಲೆಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಸಂಚು ನಡೆಯುವಾಗ ಒಟ್ಟಾರೆ ಈತ ಕಾಂಗ್ರೆಸ್ ಮುಖಂಡ ಎಂದು ಹೇಳುವಾಗ, ನಾವೆಲ್ಲರೂ ಒಂದು ರಾಜಕೀಯ ಪಕ್ಷಕ್ಕೆ ಸೇರಿದವರು, ರಾಜಕಾರಿಣಿಗಳಾಗಿ, ಸಾರ್ವಜನಿಕ ಜೀವನದಲ್ಲಿ ಪತ್ರಿಕೆಗಳು ಬರೆಯುತ್ತವೆ there is a nexus between the politicians and smugglers. ಅಂದರೆ ನಾವೆಲ್ಲರೂ ಬಂದುಬಿಟ್ಟದ್ದೇವೆ. ಈ ಆಪಾದನೆಯಿಂದ ಮುಕ್ತವಾಗಬೇಕಾದರೆ, ಇಂತಹವರು ಯಾವುದೇ ಪಕ್ಷದವರಾಗಿರಲಿ, ಜನತಾದಳ ಇದ್ದರೂ ಅಷ್ಟೇ, ಕಾಂಗ್ರೆಸ್ ಪಕ್ಷ ಇದ್ದರೂ ಅಷ್ಟೇ. ಇದರ ದುರ್ಲಾಭವನ್ನು ಪಡೆದು, ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಅಧಿಕಾರಿಗಳಿಗೆ ತೊಂದರೆ ಕೊಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರ ಏನು ಪ್ರಯತ್ನ ಮಾಡುತ್ತಿದೆ ಎನ್ನುವುದನ್ನು ತಿಳಿಯಬಯಸುತ್ತೇನೆ.

ಶ್ರೀ ಧರ್ಮಸಿಂಗ್:– ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ವಿರೋಧಪಕ್ಷದ ನಾಯಕರು ಸರ್ಕಾರದ ಮೇಲೆ ಏನು ಆಪಾದನೆ ಮಾಡುತ್ತಿದ್ದಾರೆ, ಇದು ಆಗಿಲ್ಲ ಏಕೆಂದರೆ, ಸರ್ಕಾರದ ಮುಂದೆ, ನ್ಯಾಯ ಕೊಡುವುದು ನಮ್ಮ ಕೆಲಸ. ಲಾ ಆಂಡ್ ಆರ್ಡರ್ ಮೆಯಿನ್‌ಟೇನ್ ಮಾಡುವುದು ನಮ್ಮ ಕೆಲಸ. ಇವರು ಕಾಂಗ್ರೆಸ್, ಇವರು ಜನತಾದಳ ಎಂದು ಡಿಸ್ಕ್ರಿಮಿನೇಟ್ ಮಾಡುವುದಿಲ್ಲ. ಎಷ್ಟು ನಿಷ್ಪಕ್ಷಪಾತದಿಂದ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡಿದೆ ಎಂಬುದಕ್ಕೆ ಈಗಾಗಲೇ ಹೇಳಿಕೆಯಲ್ಲಿ ಹೇಳಿದ್ದೇವೆ You have to appreciate the government. ವಸಂತ ಅಸನೋಟ್ಕರ್ ಬಂದಾಗ ಕೂಡ ಕಾರನ್ನು ನಿಲ್ಲಿಸಿ, ಅಲ್ಲಿ ಏನಿದೆ ಎನ್ನುವುದನ್ನು ಕೇಳಿದ್ದಾರೆ. ಆತನನ್ನು ನಮ್ಮಲ್ಲಿರತಕ್ಕ ಪೋಲೀಸ್ ಜನ ಏನಿದೆ ಅವರೆಲ್ಲರೂ ಹಿಂಬಾಲಿಸಿದ್ದಾರೆ. ಆತನನ್ನು ಹಿಡಿದಿದ್ದಾರೆ ಮತ್ತು ಆತನಿಗೆ ಮತ್ತು ಎಕ್ಸೈಸ್‌ನವರಿಗೆ ಘರ್ಷಣೆ ಪ್ರಾರಂಭ ಆದಾಗ ಕೂಡ ನಮ್ಮ ಪೋಲೀಸ್ ಇಲಾಖೆಯವರೂ ಕೂಡ ಯಾವರೀತಿಯ ರಕ್ಷಣೆ ಮಾಡಬೇಕೋ ಅದನ್ನು ಮಾಡಿದ್ದಾರೆ. ಈಗಾಗಲೇ, we have registered a case against him under Section 302. He has taken anticipatory bail. ಈಗ ಮತ್ತೆ abscond ಆಗಿದ್ದಾರೆ. ಇದರ ಬಗ್ಗೆ already I have directed the police officers. ಎಲ್ಲಾದರೂ ಕೂಡ ಯಾರಾದರೂ ತಪ್ಪು ಮಾಡಿದ್ದರೆ this government is not going to tolerate. As far as this government is concerned we are not going to hide anything. Definitely we are going to take action.

SRI. D.B. CHANDRE GOWDA:- We don't spare ಎಂದು ಹೇಳಿ.

SRI DHARAM SINGH:- I don't spare them. ಎರಡನೆಯದಾಗಿ ಮತ್ತೊಂದು ತಾವು ಹೇಳಿದಿರಿ, ಅವರು ಒಂದು ಕಡೆ ಅಬಕಾರಿ ರೆವಿನ್ಯೂ ಹೆಚ್ಚು ಮಾಡಿದ್ದಾರೆಂದು ಅದಕ್ಕಾಗಿಯೇ ನಾವು ತೆಗೆದುಕೊಂಡಿದ್ದು. ಫೆನ್ನಿ ಯಾರು ಗೋವಾದಿಂದ ತರುತ್ತಾರೆಂದು ಮಾನ್ಯ ದೇಶಪಾಂಡೆಯವರಿಗೆ ಗೊತ್ತು. ಗೋವಾ ಕಾರವಾರಕ್ಕೆ ಬಹಳ ಹತ್ತಿರ ಇದೆ. ಈ ಸ್ಮಗಲರ್ಸ್ ಏನಿದ್ದಾರೆ ಈ ಫಿಶರೀಸ್ ಮೆನ್ ಎನಿದ್ದಾರೆ ಅವರನ್ನು we have arrested because I have already had detailed discussion with the officers.

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ದೇಶಪಾಂಡೆಯವರಿಗೆ ಗೊತ್ತು ಎಂದು ತಾವು ಹೇಳಿದಿರಿ ಅವರು ಸ್ಮಗಲರ್ ಏನು?

ಶ್ರೀ ಧರ್ಮಸಿಂಗ್:– ಇಲ್ಲ. ಇಲ್ಲ.Sri Deshapande is comings from that area. ಗುರುತು ಇದೆ ಎಂದು ಹೇಳಿದೆ. ಫೆನ್ನಿ ಬರತಕ್ಕಂಥ ರೀತಿಯಲ್ಲಿ ಮಾಡಿದ್ದಾರೆ. ಅದಕ್ಕಾಗಿ ಮಾನ್ಯ ಉಪಾಧ್ಯಕ್ಷಣೀಯವರೇ they have taken action. This matter we have entrusted to the COD on 17-11-90. The DIG, Sri Ramanujam has also visited the place on 22-11-90. The investigation is going on. ತಾವು ನಮ್ಮ ಮೇಲೆ ವಿಶ್ವಾಸ ಇಡಿ. ಯಾರ್ಯಾರು ತಪ್ಪು ಮಾಡಿದ್ದಾರೆ ಯಾರು ಸಂಬಂಧ ಇದ್ದಾರೆನ್ನತಕ್ಕಂಥ ಮಾತು ಅಲ್ಲ. ಸರ್ಕಾರದ ಮುಂದೆ ಇವತ್ತು ಎಕ್ಷೈಜ್ ರೆವಿನ್ಯೂ ಪ್ರಶ್ನೆ ಇದೆ. ಅದಕ್ಕೂ ಕೂಡ ನಾವು ಮಾಡಬೇಕಾಗುತ್ತದೆ. ಅದೇ ಸಮಯದಲ್ಲಿ ಲಾ ಅಂಡ್ ಆರ್ಡರ್ ಬಗ್ಗೆ ತಮ್ಮ ಮನಸ್ಸಿನಲ್ಲಿ ಏನು ಒಂದು ಶಂಕೆ ಇದೆ ಅದನ್ನು ನಿವಾರಣೆ ಮಾಡುವುದಕ್ಕೆ already the government has taken action. ಮತ್ತು ಯಾರು ಡಿವಿಜನಲ್ ಕಮಿಷನರ್ಸ್ ಇದ್ದಾರೆ ಅವರು ಮತ್ತು ಡೆಪ್ಯುಟಿ ಸೂಪರಿನ್‌ಟೆಂಡೆಂಟ್ ಆಫ್ ಎಕ್ಷೈಜ್ ಅವರು ಮತ್ತು ಸರ್ಕಾರ ಇದನ್ನು ಮಾಡಬೇಕು. ನಾವು ಮಾಡುತ್ತೇವೆ. ಮಾನ್ಯ ಅಬಕಾರಿ ಸಚಿವರು ಕೂಡ ಇದ್ದಾರೆ. ಇವತ್ತು ಎಕ್ಷೈಜ್ ತಮಗೆ ಬರುತ್ತದೆ. ಈ ಎಕ್ಷೈಜ್ ಬಗ್ಗೆ ಚಿಂತನೆ ಮಾಡುವುದು ಹೆಚ್ಚು ಇದೆ. ಸರ್ಕಾರ ಕೂಡ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ನಾನು ತಮ್ಮ ಮೂಲಕ ಮಾನ್ಯ ವಿರೋಧಪಕ್ಷದ ನಾಯಕರಿಗೆ ಹೇಳಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :– ಮಾನ್ಯ ಅಧ್ಯಕ್ಷಣೀಯವರೇ ಈ ಒಂದು ಉತ್ತರ ಏನು ಇದೆ ಮಾನ್ಯ ಮಂತ್ರಿಗಳು ಕೊಟ್ಟಿರುವುದು ಅದನ್ನು ನಾವು ಪ್ರಾಮಾಣಿಕವಾಗಿ ಒಪ್ಪುತ್ತೇವೆ. ಇದು ಫ್ಯಾಕ್ಟ್ ಇದೆ. ಆದರೆ ನಾನು ತಮ್ಮ ಮುಖಾಂತರ ಅವರನ್ನು ಕೇಳುತ್ತೇನೆ. 7ನೇ ತಾರೀಖು ಒಂದು ಕಂಪ್ಲೇಂಟ್‌ನ್ನು ಎಕ್ಸೈಜ್ ಆಫೀಸರ್ ಲಾಡ್ಜ್ ಮಾಡಿರುತ್ತಾರೆ. ಆದರೆ ತಮ್ಮ ಉತ್ತರದಲ್ಲಿ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೆ ಎನ್ನುವ ಉಲ್ಲೇಖ ಇಲ್ಲ. ಮತ್ತೊಂದು ಮಾತನ್ನು ನಾನು ಹೇಳತ್ತೇನೆ. ಶ್ರೀ ವಸಂತರವರು ಸಹ 7ನೇ ತಾರೀಖು ಒಂದು ಕಂಪ್ಲೇಂಟ್ ಲಾಡ್ಜ್ ಮಾಡಿದ್ದಾರೆ. ಆದರೆ ಶ್ರೀ ವಸಂತರವರು ಅಬ್ಸಂಕಾಂಡ್ ಆಗಿದ್ದಾರೆಂದು ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. This incident has taken place on 7th November. Vasant Asnootkar was in Karwar upto 14th. Then why did the police were silent to arrest him. The Hon'ble Minister should clarify. ಇದು ಕೇವಲ ಫೆನ್ನಿ ಸ್ಮಗಲಿಂಗ್ ಮಾಡುವುದೇ ಒಂದು ಸಮಸ್ಯೆ ಅಲ್ಲ. ನಮ್ಮ ಜಿಲ್ಲೆಯ ಇತಿಹಾಸ ನೋಡುವುದಾದರೆ ಆದೂ ಕಾರವಾರದಲ್ಲಿ where people are law abiding ಈ ಒಂದು incident. ನಿಂದಾಗಿ ಸಾಕಷ್ಟು ಟೆನ್‌ಷನ್ ನಿರ್ಮಾಣವಾಗಿವೆ. ಅಂಗಡಿಗಳು ಬಂದ್ ಆಗಿದ್ದು ಇವತ್ತು ಸುಮಾರು 50 ಜನರಿಗೆ ಗಾಯಗಳಾಗಿ ಒಬ್ಬರ ಕೂಲೆ ಆಗಿದೆ. 10 ಜನ ಎಕ್ಷೈಜ್ ಆಫೀಸರ್ ಇಂಜೂರ್ಡ್ ಆಗಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ ಸ್ಮಗಲಿಂಗ್ ಆಗುತ್ತದೆ. ಗೋವಾ ಕಾರವಾರಕ್ಕೆ ಹತ್ತಿರ ಇದೆಯಾದ್ದರಿಂದ ಸ್ಮಗಲಿಂಗ್ ಆಗುತ್ತದೆ. ಆ ದಿನ ಶ್ರೀ ವಸಂತರವರು ಕಾರಿನಲ್ಲಿ ಹೋಗುತ್ತಿದ್ದಾಗ ಒಬ್ಬ ನಾಯಕ್ ಎನ್ನುವ ಅಧಿಕಾರಿ ಆ ಗಾಡಿಯನ್ನು ಚೆಕ್ ಮಾಡಬೇಕೆಂದು ನಿಲ್ಲಿಸಿದಾಗ ಅವರನ್ನು ಅಸಾಲ್ಟ್ ಮಾಡಿ ಹೋದರು. ಆ ಗಾಡಿ ಮೇಲೆ ಕೇಸ್ ಮಾಡಿ ಹಿಡಿದರು. ಪುನಃ ಆ ಜನರು ಅವರನ್ನು ಹೊಡೆದರು. ಅವರು ಕಂಪ್ಲೇಂಟ್ ಕೊಟ್ಟರು.ಇವತ್ತು ತಾವು ಕೇವಲ ಸಿ ಓ ಡಿ ಎನ್‌ಕ್ವೈರಿ ಮಾಡುತ್ತಿದ್ದೀರಿ. ಆದರೆ ಇದುವರೆಗೂ ಯಾರು ಅರೆಸ್ಟ್ ಆಗಲಿಲ್ಲ ಏತಕ್ಕೆ ? ಸರ್ಕಾರಕ್ಕೆ ಹೆಚ್ಚಿನ ಗೌರವ ಬೇಕು. ನಾನು ಮಾನ್ಯ ಎಕ್ಷೈಜ್ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಿಮ್ಮ ಇಲಾಖೆಯ 10 ಜನ ಆಫೀಸರ್ಸ್ ಮೇಲೆ ಅಸಾಲ್ಟ್ ಆಗಿದೆ. ಆ ಜನರಿಗೆ ಕೆಲಸ ಮಾಡಲು ಇವತ್ತು ಮಾರೇಲ್ ಇಲ್ಲ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ, ಇವತ್ತು ಅವರು ಎಕ್ಷೈಜ್

ಆಫೀಸ್‌ನಲ್ಲಿ ಕೆಲಸ ಮಾಡುವುದಕ್ಕೆ ರೆಡಿ ಇಲ್ಲ. ಈ ಬಗ್ಗೆ ತಾವು ಚೆಕ್ ಮಾಡಿ. ಅವರು ಹೇಳುತ್ತಾರೆ ನಾವೇತಕೆ ಒಳ್ಳೆಯ ಕೆಲಸ ಮಾಡಬೇಕು ನಮಗೇನು ಅವಶ್ಯಕತೆ ಇದೆ ಎಂದು. ನಾನು ಕಾಂಗ್ರೆಸ್ ಮುಖಂಡರು ಮಾಡಿದರೆ ಕ್ರಮ ತೆಗೆದೆಕೊಳ್ಳಿ ಅಥವಾ ಜನತಾ ದಳದವರು ಮಾಡಿದ್ದರೆ ಕ್ರಮ ತೆಗೆದೆಕೊಳ್ಳಬೇಡಿ ಎಂದು ಹೇಳುತ್ತಿಲ್ಲ ಅವರು ಯಾರೇ ಆಗಿರಲಿ ಕ್ರಮ ತೆಗೆದುಕೊಳ್ಳಿ ಇವತ್ತು ಪತ್ರಿಕೆಯಲ್ಲಿ ಈ ರೀತಿ ಬಂದಿದೆ Fenny smugglers run ride Arson and group clashes Nocks in Karwar. " The unholy allies between Government officers smugglers and politicians has created a reign of terror in the district with arson and group clashes being reported inspite of enforcement of prohibitory orders on recent clashes over smuggling of Goa fenny out of 50 persons, 10 of them from the excise department have sustained injuries, was murdered and several Government Vehicles set ablazed is the conditions of three of the injured is said to be serious. The clashes took place in Karwar, Kodibag, magari and other places in Goa border. Smuggling of Goa fenny is highly profitable business in view of the rise in prices of liquor in the state. So, the incident has taken place, ಅಲ್ಲಿ ಸರ್ಕಾರದ ಆಸ್ತಿ ನಷ್ಟ ಆಗಿದೆ ಮತ್ತು ನಿಮ್ಮ ಅಧಿಕಾರಿಗಳು ಸಹ ಇಂಜೂರ್ಡ್ ಆಗಿದ್ದಾರೆ.

MADAM DEPUTY SPEAKER:- You can speak only clarification.

ಶ್ರೀ ಆರ್ ವಿ. ದೇಶಪಾಂಡೆ:– ಆದ್ದರಿಂದ ಇವತ್ತು ಅವರುಗಳನ್ನು ಇವತ್ತಿನ ದಿವಸ ಅರೆಸ್ಟ್ ಏಕೆ ಮಾಡಲಿಲ್ಲ? ಅದರ ಬಗ್ಗೆ ನನಗೆ ಕನ್ವಿನ್ಸ್ ಮಾಡಬೇಕು. ಆದೇ ಪ್ರಕಾರ ಪತ್ರಕರ್ತರು ಏನು ಪತ್ರಿಕೆಗಳಲ್ಲಿ ಬರೆದಿದ್ದಾರೆ? ಅವರಿಗೆ ಕೇಳುತ್ತಿದ್ದಾರೆ ಏಕೆ ಬರೆದಿರಿ ಎಂದು ನಾನು ಸಮ್ಮನೆ ಹೇಳಬೇಕೆಂದು ಹೇಳುತ್ತಿಲ್ಲ They have threatened. He is a Cong(I) Leader. It has appeared in the press.

** ** ** **
** ** ** **

ಆದರಿಂದ, ಇವತ್ತು ಲೋಕಲ್ ಎಂ.ಎಲ್.ಎ. ಸಪೋರ್ಟ್, ಸಹಕಾರದ ಮೂಲಕ ಇವತ್ತು ಪೋಲೀಸ್ ಅಧಿಕಾರಿಗಳೂ ಸಹಾ ಯಾವುದೂ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ.

ಶ್ರೀ ಧರ್ಮಸಿಂಗ್:– ಅವರೂ ಕೂಡಾ ಮಂತ್ರಿಗಳಾಗಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಯಾರು ಇಲ್ಲಿ ಸದನದ ಒಬ್ಬರು ಸದಸ್ಯರ ಮೇಲೆ ಆಪಾದನೆ ಮಾಡುತ್ತಿದ್ದಾರೋ ಅವರು ಈ ಮನೆಯಲ್ಲಿ ಇಲ್ಲ. ಉಳಿದ ವಿಚಾರಗಳ ಬಗ್ಗೆ ನಾನು ಉತ್ತರ ಕೊಡುತ್ತೇನೆ ಯಾರ ಮೇಲೆ ಇವರು ಆರೋಪ ಮಾಡುತ್ತಿದ್ದಾರೋ ಅವರು ಈ ಸದನದ ಸದಸ್ಯರಾಗಿದ್ದಾರೆ ಮತ್ತು ಅವರು ಹೌಸ್‌ನಲ್ಲಿ ತಮ್ಮನ್ನು ಅಲ್ಲಿ ಡಿಫೇಂಡ್ ಮಾಡಿಕೊಳ್ಳುವುದಕ್ಕೆ ಈಗ ಅವರಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ :– ನಾನು ಆಪಾದನೆ ಮಾಡುತ್ತಿಲ್ಲ. ಅವರು ಇದನ್ನು ಡಿನೈ ಮಾಡಲಿ.

ಶ್ರೀ ಧರ್ಮಸಿಂಗ್ : ಅಧ್ಯಕ್ಷರೇ ಅವರು ಹೇಳುವುದು ನಾಳೆ ದಿವಸ ಪತ್ರಿಕೆಗಳಲ್ಲಿ ಬರುತ್ತದೆ. ಇದರಿಂದ ಇನ್‌ವೆಸ್ಟಿಗೇಷನ್‌ಗೆ ತೊಂದರೆಯಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ:– ಸನಾನ್ಯ ಅಧ್ಯಕ್ಷರೇ, ಏತಕ್ಕೆಂದರೆ, ಈ ಒಂದು ಕೃತ್ಯದ ಬಗ್ಗೆ ಸರಿಯಾದ ತನಿಖೆಯಾಗಬೇಕು. ಇದರಲ್ಲಿ ಬರೀ ರಾಜಕೀಯ ಉದ್ದೇಶ ಸಾಧನೆಯಾದರೆ ಪ್ರಯೋಜನವಾಗುವುದಿಲ್ಲ. ಅದನ್ನು ಸರಿಯಾದ ರೀತಿಯಲ್ಲಿ ವಿಚಾರಕ್ಕೆ ಬಿಟ್ಟರೆ ಎಲ್ಲರಿಗೂ ಸಹಾಯವಾಗುತ್ತದೆ. ಇದರಿಂದ ಸತ್ಯವನ್ನು ಹುಡುಕಲಿಕ್ಕೆ ಸಹಾಯವಾಗುತ್ತದೆ. ಆದರೆ ಈಗ ಸದನದಲ್ಲಿ ಸದಸ್ಯರಿಲ್ಲ. ಅವರು ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ಗೈರುಹಾಜರಾಗಿದ್ದಾರೆ. ತಮಗೆ ಗೊತ್ತಿರಬಹುದು. ಅವರಿಗೆ ಆರೋಗ್ಯ ಚೆನ್ನಾಗಿಲ್ಲವೆಂದು ಅವರು ಬಂದಿಲ್ಲ. ಆದ್ದರಿಂದ ಆ ಶಾಸಕರ ಬಗ್ಗೆ ಮಾಡಿರುವ ಆಪಾದನೆಯು ಕಡತಕ್ಕೆ ಹೋಗಿದೆ ಅದನ್ನು ಹಿಂತೆಗೆದುಕೊಳ್ಳಬೇಕು. ಏನಾದರೂ ಇದ್ದರೆ ನೋಟೀಸ್ ಕೊಡಲಿ ಮತ್ತು ಮಾನ್ಯ ಸದಸ್ಯರು ಬರಲಿ ಆವಾಗ ಏನು ಬೇಕಾದರೂ ಆಪಾದನೆ ಮಾಡಲಿ.

ಶ್ರೀ ಡಿ. ಬಿ. ಚಂದ್ರೇಗೌಡ:– ಒಂದು ನಿಮಿಷ ಇವರು, ಸಂಬಂಧಪಟ್ಟಂಥ ಶಾಸಕರು ಜಿಲ್ಲಾಧಿಕಾರಿಗಳ ಹತ್ತಿರ ಒಂದು ಡೆಲಿಗೇಷನ್ ಹೋಗಿದ್ದಾರೆಂದು ಹೇಳಿದ್ದಾರೆ ಅದು ಸರಿಯೋ?

ಶ್ರೀ ಎಂ. ವೀರಪ್ಪಮೊಯಿಲಿ:– ಅದು ನಮಗೆ ಗೊತ್ತಿಲ್ಲ.

ಶ್ರೀ ಧರ್ಮಸಿಂಗ್ :– ಸದಸ್ಯರು ಸದನದಲ್ಲಿದ್ದಾಗ ಹೇಳಿದರೆ ಒಪ್ಪಿಕೊಳ್ಳಬಹುದು.

ಶ್ರೀ ಆರ್. ವಿ. ದೇಶಪಾಂಡೆ:– ನಾನು ಯಾವ ತರಹದ ಆಪಾದನೆಯನ್ನು ಶಾಸಕರ ಮೇಲೆ ಮಾಡುತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ:– ತಾವು ಆಪಾದನೆ ಮಾಡುವಾಗಲೂ ರೂಡ್ ಆಗಿ ಮಾಡಲಿಲ್ಲ. ಅದು ತಮ್ಮ ಸಂಸ್ಕೃತಿಯನ್ನು ತೋರಿಸುತ್ತದೆ. ಆದರೆ ಆ ಸಂಸ್ಕೃತಿಯ ಚೌಕಟ್ಟಿನ ಹಿನ್ನೆಲೆಯಲ್ಲಿ ಒಂದು ಹರಿತವಾದಂಥ ಆಪಾದನೆಯ ಚೂರಿ ಇದೆ. ಅದನ್ನು ಮರೆಯಬೇಡಿ.

ಶ್ರೀ ಆರ್. ವಿ. ದೇಶಪಾಂಡೆ: ನಾನು ಆಪಾದನೆ ಮಾಡುತ್ತಿಲ್ಲ. ನಾನು ಇಷ್ಟೇ ಹೇಳುತ್ತಿದ್ದೇನೆ , ಇವತ್ತು ಶಾಸಕರು ಸ್ಮಗ್ಲರ್ಸ್ ಎಂದು ಹೇಳುತ್ತಿಲ್ಲ. ಅವರು ಡೆಲಿಗೇಷನ್ ತೆಗೆದುಕೊಂಡು ಡಿ.ಸಿ. ಅವರ ಹತ್ತಿರ ಹೋಗಿದ್ದಾರೆ. ನಾನು ಇಷ್ಟೇ ಹೇಳುತ್ತೇನೆ.

Sri M. VEERAPPA MOILY:- When you tag a criminal with an MLA, then, it is a serious matter.

Sri. R.V. DESHPANDE:- Fresh violence has started ನಾನು ಏನು ಹೇಳುತ್ತಿದ್ದೇನೆಂದರೆ, 3–4 ಪ್ರಶ್ನೆಗೆ ತಾವು ಉತ್ತರ ಕೊಡಬೇಕು. ಮೊದಲನೆಯದು ಅವರನ್ನು ಅರೆಸ್ಟ್ ಏಕೆ ಮಾಡಲಿಲ್ಲ? 2ನೆಯದು ಒಬ್ಬ ಹಿರಿಯ ಅಧಿಕಾರಿ ಮೇಲೆ ನಿಮ್ಮ ಡಿಪಾರ್ಟ್‌ಮೆಂಟಿನ ಮೇಲೆ ಅಸಾಲ್ಟ್ ಆಗಿದೆ. ಇದರಿಂದ ನಿಮ್ಮ ಡಿಪಾರ್ಟ್‌ಮೆಂಟ್ ಮೊರಾಲ್ ಹೋಗಿದೆ. ಸಿ.ಒ.ಡಿ. ಎನ್‌ಕ್ವಯರಿ ಮಾಡಿದರೆ ಗೊತ್ತಾಗುತ್ತದೆ ಇವತ್ತು ಪೋಲೀಸರು ಎಷ್ಟು ಮಟ್ಟಿಗೆ ಎಕ್ಸೈಸ್ ಆಫೀಸರ್‌ಗೆ ಪ್ರೊಟೆಕ್ಷನ್ ಕೊಡುತ್ತಾರೋ ಗೊತ್ತಿಲ್ಲ. ಒಬ್ಬ ಹಿರಿಯ ಅಧಿಕಾರಿಗಳಿಂದ ನೀವು ಇದರ ಬಗ್ಗೆ ಎನ್‌ಕ್ವಯರಿ ಮಾಡಿಸುತ್ತೀರಾ?

ಮೂರನೆಯದು ಎಕ್ಸೈಸ್ ಆಫೀಸರ್ಸ್ ಮತ್ತು ಇತರ ಜನರು ಇನ್‌ಜೂರ್ಡ್ ಆಗಿದ್ದಾರೆ ಅವರಿಗೆ ಕಾಂಪೆನ್‌ಸೇಷನ್ ಕೊಡುವ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೇ? ಈಗ ಸಿ.ಓ.ಡಿಗೆ ಎನ್‌ಕ್ವೈರಿಗೆ ತಾವು ಆರ್ಡರ್ ಮಾಡಿದ್ದೀರಿ, ಸಂತೋಷ. ಆದರೆ ಈ ಒಂದು ಎಕ್ಸೈಸ್ ಡಿಪಾರ್ಟ್‌ಮೆಂಟಿನ ಮೊರಾಲ್ ಏನು ಹೋಗಿದೆ, ಆ ಮೊರಾಲ್‌ನ್ನು ಬೂಸ್ಟ್ ಅಪ್ ಮಾಡಲು ತಾವು ಪ್ರಯತ್ನ ಮಾಡಬೇಕು. ತಾವು ಸಫಿಷಿಯೆಂಟ್ ಕಾಂಪನ್‌ಸೇಷನ್ ಕೊಡಬೇಕಾಗುತ್ತದೆ. ಸ್ಮಗ್ಲಿಂಗ್ ಏನು ಆಗಿದೆ ಅದನ್ನು ಕಂಟ್ರೋಲ್ ಮಾಡಬೇಕಾದರೆ ತಾವು ಸಫಿಷಿಯೆಂಟ್ ಫೋರ್ಸ್‌ನ್ನು ಅಲ್ಲಿ ಕೊಡಬೇಕಾಗುತ್ತದೆ. ಎಫಿಷಿಯೆಂಟ್ ಜನರನ್ನು ಅಲ್ಲಿ ಹಾಕಬೇಕಾಗುತ್ತದೆ ಮತ್ತು ಸಫಿಷಿಯೆಂಟ್ ಆರ್ಮ್ಸ್‌ನ್ನು ಕೊಡಬೇಕಾಗುತ್ತದೆ. ಇವೊತ್ತು ಅಲ್ಲಿ ಫೋರ್ಸ್ ಇಲ್ಲ, ಸೀಜನಲ್ ಸ್ಮಗ್ಲಿಂಗ್ ಹೆಚ್ಚು ಆಗುತ್ತದೆ. ನೀವು ಫೋರ್ಸ್ ಸಪ್ಲೈ ಮಾಡಬೇಕು ಮತ್ತು ಕಲ್‌ಪ್ರಿಟ್ಸ್ ಯಾರು ಇದ್ದಾರೆ ಅವರ ಬಗ್ಗೆ ಯಾವ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ ಅದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಉಪಾಧ್ಯಕ್ಷರು :– ಈಗ ಮಾನ್ಯ ಸದ್ಯಸರು ಮಾತನಾಡುತ್ತಾ ಈ ಸಭೆಯ ಗೈರು ಹಾಜರಾದ ಸದ್ಯಸರ ಬಗ್ಗೆ ಒಂದೆರಡು ಆಪಾದನೆಗಳನ್ನು ಮಾಡಿದ್ದಾರೆ. ಅದನ್ನು ಕಡತದಿಂದ ತೆಗೆದುಹಾಕುತ್ತೇನೆ.

ಶ್ರೀ ಧರ್ಮಸಿಂಗ್:– ಈಗಾಗಲೇ ಮಾನ್ಯ ದೇಶಪಾಂಡೆಯವರು ಏನು ಸಂಶಯವನ್ನು ವ್ಯಕ್ತ ಮಾಡಿದ್ದಾರೆ ಆ ಬಗ್ಗೆ ನಾನು ಹೇಳಿದ್ದೇನೆ. ಈಗಾಗಲೇ ಏನು ಘಟನೆ ನಡೆದಿದೆ ಆ ಬಗ್ಗೆ already we have entrusted it to C.O.D. ಸಿ ಓ ಡಿ ಹಾಗೂ ಡಿ ಐ ಜಿಯವರು ಕೂಡ ಮೊನ್ನೆ 22ನೇ ತಾರೀಖಿನ ದಿವಸ ಕಾರವಾರಕ್ಕೆ ಹೋಗಿದ್ದಾರೆ. ಇವೊತ್ತು ಎಂಟೈರ್ ಮ್ಯಾಟರ್ ಇನ್‌ವೆಸ್ಟಿಗೇಷನ್ ಆಗಿ ಥರೋ ಇನ್‌ವೆಸ್ಟಿಗೇಷನ್ ಆಗುತ್ತಿದೆ. ರಿಪೋರ್ಟ್ ಕೂಡ ಬರಲಿ. you have not arrested anybody ಎಂದು ತಾವು ಹೇಳಿದಿರಿ. ನಾವು 7 ಹಾಗೂ 8ನೇ ತಾರೀಖಿನ ದಿವಸ 51 ಮಂದಿಯನ್ನು ಅರೆಸ್ಟ್ ಮಾಡಿದ್ದೇವೆ. ಮತ್ತು ಬೇಲ್‌ನಲ್ಲಿ ರಿಲೀಸ್ ಆಗಿದ್ದಾರೆ. we have arrested, some people.

ಶ್ರೀ ಆರ್.ವಿ.ದೇಶಪಾಂಡೆ:– ಮರ್ಡರ್ ಕೇಸ್ ಹಾಕಿದ್ದೀರಾ?

ಶ್ರೀ ಧರ್ಮಸಿಂಗ್:– ಯಾರ್ಯಾರು ಡಿ.ಸಿ.ಆಫೀಸಿಗೆ, ಡಿ.ವೈ.ಎಸ್.ಪಿ. ಆಫೀಸಿಗೆ ಹೋಗಿ ಗಲಾಟೆ ಮಾಡಿದ್ದಾರೆ, ಯಾರು ಲಾ ಅಂಡ್ ಆರ್ಡರ್ ಬ್ರೇಕ್ ಮಾಡುವುದಕ್ಕೆ ಹೋಗಿದ್ದಾರೆ ಅವರನ್ನು ಅರೆಸ್ಟ್ ಮಾಡಿದ್ದೇವೆ. ಇಲ್ಲಿ ಕಲಂ 302ರಲ್ಲಿ ವಸಂತ ಅಸ್ನೋಡ್‌ಕರ್ ಎಂಬುವರನ್ನು ಏನು ಅರೆಸ್ಟ್ ಮಾಡಿದ್ದೇವೆ ಅವರು ಬೇಲ್ ಹೋಗಿದ್ದಾರೆ ಬೇಲ್ ರಿಜೆಕ್ಟ್ ಆಗಿ ಅವರು ಅಬ್‌ಸ್ಕಾಂಡಿಂಗ್ ಆಗಿದ್ದಾರೆ. ಅವರ ಮೇಲೆ ನಾವು ವಾಚ್ ಮಾಡುತ್ತಿದ್ದೇವೆ. ನಮ್ಮಲ್ಲಿ ತಾವು ವಿಶ್ವಾಸ ಇಡಿ, ಇಮ್ಮೀಡಿಯಟ್ ಆಗಿ ಅವರನ್ನು ಕೂಡ ಅರೆಸ್ಟ್ ಮಾಡುತ್ತೇವೆ. ಯಾರನ್ನು ಕೂಡ ಅರೆಸ್ಟ್ ಮಾಡಿಲ್ಲ ಎಂದು ತಾವು ಹೇಳಿದ್ದೀರಿ. 51 ಮಂದಿಯನ್ನು ಅರೆಸ್ಟ್ ಮಾಡಿದ್ದೇವೆ. ನಿನ್ನೆ ಕೂಡ ಕೆಶನ್ ಚಂದರ್ ಎಂಬುವರನ್ನು ಅರೆಸ್ಟ್ ಮಾಡಿದ್ದೇವೆ. ಇವೊತ್ತು ಕೂಡ ವಿನೋದ್ ಬೆಂಗಳೂರು ಎಂಬುವರನ್ನು ನಾವು ಅರೆಸ್ಟ್ ಮಾಡಿದ್ದೇವೆ. ಇವರುಗಳ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಇವೊತ್ತಿನ ದಿನ ಎಕ್ಸೈಜ್ ದಿಪಾರ್ಟ್‌ಮೆಂಟ್‌ನವರಿಗೆ ಪ್ರೊಟೆಕ್ಷನ್ ಕೊಡತಕ್ಕ ರೀತಿಯಲ್ಲಿ ಫಸ್ಟ್ ಟೈಮ್ ಇಂತಹ ಪ್ರಕರಣ ನಮ್ಮ ಗಮನಕ್ಕೆ ಬಂದ ಕೂಡಲೇ ಅಷ್ಟು ಪ್ರಾಂಪ್ಟ್ ಆಗಿ ನಾವು ಆಕ್ಷನ್ ತೆಗೆದುಕೊಂಡಿದ್ದೇವೆ. ನೀವು ಸರ್ಕಾರವನ್ನು ಅಪ್ರಿಷಿಯೇಟ್ ಮಾಡಬೇಕು. ಮುಂದೆ ಕೂಡ ತಮಗೆ ಏನು ಸಂಶಯ ಇದೆ ಅದರ ಬಗ್ಗೆ ನಾವು ಸಿ.ಓ.ಡಿಗೆ ಎಂಟ್ರಸ್ಟ್ ಮಾಡಿದ್ದೇವೆ. ರಿಪೋರ್ಟ್ ಗವರ್ನಮೆಂಟ್‌ಗೆ ಬರುತ್ತದೆ. ಬಂದ ಕೂಡಲೇ ಡೆಫನೆಟ್ ಆಗಿ ಆಕ್ಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್.ವಿ.ದೇಶಪಾಂಡೆ:– ಇಂಪಾರ್ಷಿಯಲ್ ಆಗಿ ಎನ್‌ಕ್ವೈರಿ ಮಾಡುತ್ತೇನೆ ಎಂದು ಹೇಳಿದ್ದೀರಿ, ಸಂತೋಷ, ಆದರೆ ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. I have already said that your reply has been fair. ಯಾವ ಎಕ್ಸೈಜ್ ಆಫೀಸರ್ಸ್ ಇಂಜೂರ್ಡ್ ಆಗಿದ್ದಾರೆ, ಎಕ್ಸೈಜ್ ಸ್ಟಾಫ್ ಇಂಜೂರ್ಡ್ ಆಗಿದಾರೆ ಅವರಿಗೆ ಕಾಂಪೆನ್‌ಸೇಷನ್ ಕೊಡುವ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅದೇ

ರೀತಿ ಪೋಲೀಸ್ ಇಲಾಖೆಯವರು ಸರಿಯಾಗಿ ಕಂಪ್ಲೈಂಟ್ ಅನ್ನು ಎಂಟರ್‌ಟೇನ್ ಮಾಡುತ್ತಾ ಇಲ್ಲ. ಏಕೆಂದರೆ the Police Department is not entertaining complaints. They want to help the Cong(I) Leader. ಎಕ್ಸೈಜ್ ಆಫೀಸರ್ಸ್ ಮೇಲೆ ದಾಳಿ ಬರಬಹುದು ಎಂಬ ಸಂಶಯ ನನಗೆ ಇದೆ. ಅದರ ಸಲುವಾಗಿ ಸಪರೇಟ್ ಆಗಿ ಇದರ ಬಗ್ಗೆ ಸೀನಿಯರ್ ಆಫೀಸರ್ಸ್‌ರವರಿಂದ ಎನ್‌ಕ್ವೈರಿ ಮಾಡಿಸುತ್ತೀರಾ? ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಿ.

ಶ್ರೀ ಧರ್ಮಸಿಂಗ್:– ತಮ್ಮ ಕಾಲ್ ಅಟೆನ್‌ಷನ್ ಬಂದ ಮೇಲೆ Personally I had a talk with the S.P. Our Chief Minister has also directed. We don't spare anybody. ಕಾಂಪೆನ್‌ಸೇಷನ್ ಬಗ್ಗೆ ಹೇಳಿದ್ದೀರಿ. ಎಲ್ಲೆಲ್ಲಿ ಈ ತರಹ ಕಾಂಪನ್‌ಸೇಷನ್ ಕೊಡತಕ್ಕದ್ದು ಇದೆ ಅದನ್ನು ಕೊಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ:– ಪ್ರೆಸ್‌ನವರಿಗೂ ಬೆದರಿಕೆ ಹಾಕಿದ್ದಾರೆ. ಅವರಿಗೂ ಸಹ ಪ್ರೊಟೆಕ್ಷನ್ ಕೊಡುವುದಕ್ಕೆ ಹೋಗಬೇಕು.

ಶ್ರೀ ಧರ್ಮಸಿಂಗ್ :– ಪ್ರೆಸ್‌ನವರಿಗಾಗಲಿ, ಬೇರೆ ಯಾರಿಗೇ ಆಗಲಿ, ಈ ರೀತಿ ವದಂತಿ ಮಾಡುತ್ತಾರೆ ಅಷ್ಟೇ ಯಾರಿಗೂ ಕೂಡ ಏನೂ ಆಗುವುದಿಲ್ಲ. We will take care of that.

Sri. S.H. KOUJALGI: After this incident, whether the Excise Officers have been transferred from this place? ಎಕ್ಸೈಜ್ ಅಧಿಕಾರಿಗಳನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡಿದ ನಂತರ ತಮ್ಮನ್ನೂ ಕೂಡ ವರ್ಗ ಮಾಡುತ್ತಾರೆ ಎಂದು ಅಲ್ಲಿದ್ದಂಥ ಪೋಲೀಸ್ ಅಧಿಕಾರಿಗಳು ತಿಳಿದು ವಸಂತನನ್ನು ಹಿಡಿಯುವುದಕ್ಕೆ ಅವರು ಪ್ರಯತ್ನ ಮಾಡುತ್ತಾ ಇಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ? ಇವೊತ್ತು ಎಕ್ಸೈಜ್ ಆಫೀಸರ್ಸ್‌ನ್ನು ತಾವುಗಳು ಟ್ರಾನ್ಸ್‌ಫರ್ ಮಾಡಿದ್ದೀರಿ. ಹೀಗೆ ಟ್ರಾನ್ಸ್‌ಫರ್ ಮಾಡಿದ ನಂತರ ತಮ್ಮನ್ನು ಕೂಡ ರೆಗ್ಯುಲರ್ ಪೋಲೀಸ್‌ನಲ್ಲಿದ್ದವರನ್ನು ಸಿಓಡಿಗೆ ಹಾಕುತ್ತಾರೆ ಎಂಬ ಭಯದಿಂದ ಅವರು ವಸಂತನ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ. ಈ ವಸಂತನು ಮೊದಲಿಂದಲೂ ವೀರಪ್ಪನ್ ರೀತಿಯಲ್ಲಿ ಫೆನ್ನಿ ವ್ಯಾಪಾರ ಮಾಡಿಕೊಂಡು ಬಂದಿದ್ದಾನೆ. ಇಂಥ ಮನುಷ್ಯನನ್ನು ಏತಕ್ಕಾಗಿ ಹಿಡಿದಿಲ್ಲ? ಅದರ ಸಲುವಾಗಿ ಎಕ್ಸೈಜ್ ಆಫೀಸರ್‌ನ್ನು ವರ್ಗ ಮಾಡಿದ್ದು ನಿಜವೆ? ಅದಕ್ಕೆ ಕಾರಣ ಏನು?

ಶ್ರೀ ಧರ್ಮಸಿಂಗ್:– ಎಕ್ಸೈಜ್ ಆಫೀಸರ್ಸ್ ಯಾರನ್ನೂ ಟ್ರಾನ್ಸ್‌ಫರ್ ಮಾಡಿಲ್ಲ. ಹಾಗೆ ಟ್ರಾನ್ಸ್‌ಫರ್ ಮಾಡತಕ್ಕಂಥಾದ್ದು ಸರಕಾರದ ವಿಚಾರವೂ ಇಲ್ಲ. ಯಾವ ಪೋಲೀಸ್ ಅಧಿಕಾರಿಗಳೂ ಕೂಡ ಏನಾದರೂ ತೊಂದರೆಯಾದೀತು ಎಂದು ಯಾರಿಗಾದರೂ ಪ್ರೊಟೆಕ್ಷನ್ ಕೊಡುವುದಕ್ಕೆ ತಯಾರಾಗಿಲ್ಲ. ಮತ್ತು ಹಾಗೆ ಮಾಡಿಲ್ಲ. ಈ ಫೆನ್ನಿ ತಯಾರಿಕಾ ಕಳ್ಳಸಾಗಾಣಿಕೆದಾರರು ಬಹಳ ವರ್ಷಗಳಿಂದ ಇದನ್ನು ಮಾಡಿಕೊಂಡು ಬಂದಿದ್ದಾರೆ. ಆದರೆ ಯಾವ ಸರಕಾರವೂ ಇದರ ಬಗ್ಗೆ ಸಕಾಲಿಕ ಕ್ರಮ ತೆಗೆದುಕೊಂಡಿಲ್ಲ. ಆದರೆ ನಮ್ಮ ಸರಕಾರ ಕ್ರಮ ತೆಗೆದುಕೊಂಡಿದೆ. ನಾವು ಅದನ್ನು ನಿಲ್ಲಿಸುತ್ತೇವೆ.

ನಿಯಮ 334ರ ಮೇರೆಗೆ

(1) ಪ.ಜಾ/ಪ.ವರ್ಗದವರ ಶಿಕ್ಷಣ ಸಂಸ್ಥೆಗಳಿಗೆ ಜಿಲ್ಲಾ ಪರಿಷತ್‌ನವರಿಂದ ಸಹಾಯ ಧನ ದೊರೆಯದಿರುವುದು.

Sri MANOHAR INAPUR:- As per the Government Order, Sch.Caste and Sch.Tribe educational institutions are entitled for salary grant and other grants